ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : (798) 80
ಸದಸ್ಯರ ಹೆಸರು : ಶ್ರೀ ಶಶೀಲ್ ಜಿ ನಮೋಶಿ (ಶಿಕ್ಷಕರ ಕ್ಷೇತ್ರ)
ಉತ್ತರಿಸುವ ದಿನಾಂಕ : 24-08-2026
ಉತ್ತರಿಸುವ ಸಚಿವರು : ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು.

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಇರುವ ಒಟ್ಟು ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಸಂಖ್ಯೆ ಎಷ್ಟು; ಈ ಕಾಲೇಜುಗಳಿಗೆ ಮಂಜೂರಾದ ಒಟ್ಟು ಭೋಧಕ ಮತ್ತು ಭೋದಕೇತರ ಹುದ್ದೆಗಳು ಎಷ್ಟು ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಉಪನ್ಯಾಸಕರುಗಳ ಸಂಖ್ಯೆ ಎಷ್ಟು; (ವಿಷಯಗಳ ಸಮೇತ ಜಿಲ್ಲಾವಾರು ಹಾಗೂ ವಿಭಾಗವಾರು ಮಾಹಿತಿ ನೀಡುವುದು); | ರಾಜ್ಯದಲ್ಲಿ ಒಟ್ಟು 1371 ಸರ್ಕಾರಿ ಪದವಿಪೂರ್ವ ಕಾಲೇಜುಗಳು ಇರುತ್ತವೆ. ಈ ಕಾಲೇಜುಗಳಿಗೆ ಒಟ್ಟು 12913 ಬೋಧಕ ಮತ್ತು 2056 ಬೋಧಕೇತರ ಹುದ್ದೆಗಳು ಮಂಜೂರಾಗಿರುತ್ತವೆ. ಪ್ರಸ್ತುತ 7423 ಉಪನ್ಯಾಸಕರು ಕರ್ತವ್ಯ ನಿರ್ವಹಿಸುತ್ತಿರುತ್ತಾರೆ.<br>ವಿಷಯಗಳ ಮಾಹಿತಿಯನ್ನು ಅನುಬಂಧ-01 ರಲ್ಲಿ ಲಗತ್ತಿಸಿದೆ.<br>ವಿಷಯಗಳ ಸಮೇತ ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-02 ರಲ್ಲಿ ಲಗತ್ತಿಸಿದೆ. |
| ಆ) | ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಪ್ರೌಢ ಶಾಲೆಯಿಂದ ಬಡ್ತಿ ಮೂಲಕ ನೇಮಕ ಹೊಂದಿರುವ ಉಪನ್ಯಾಸಕರ ಶೇಕಡಾವಾರು ಸಂಖ್ಯೆ ಎಷ್ಟು; ಪ್ರಸ್ತುತ ಬಡ್ತಿ ಮೂಲಕ ಎಷ್ಟು ಉಪನ್ಯಾಸಕರ ಹುದ್ದೆಗಳನ್ನು ತುಂಬಿಕೊಳ್ಳಲು ಅನುಮೋದನೆ ನೀಡಲಾಗಿದೆ; (ವಿಷಯವಾರು ಹುದ್ದೆಗಳ ಜಿಲ್ಲಾವಾರು ಮಾಹಿತಿ ನೀಡುವುದು) | ಸರ್ಕಾರಿ ಪದವಿಪೂರ್ವ ಕಾಲೇಜುಗಳಲ್ಲಿ ಪ್ರೌಢಶಾಲೆಯಿಂದ ಬಡ್ತಿ ಮೂಲಕ ನೇಮಕ ಹೊಂದಿರುವ ಉಪನ್ಯಾಸಕರ ಶೇಕಡಾವಾರು ಸಂಖ್ಯೆ 25.65% (out of 7423 total lecturers working, promotion working lecturer is (1904) ಪ್ರಸ್ತುತ ಅರ್ಹತಾ ಪಟ್ಟಿಯಾನುಸಾರ ಮುಂಬಡ್ತಿ ಕೋಟಾದ 1015 ಖಾಲಿ ಹುದ್ದೆಗಳಿಗೆ ಉಪನ್ಯಾಸಕರ ಹುದ್ದೆಗಳನ್ನು ತುಂಬಿಕೊಳ್ಳುವ ಪ್ರಕ್ರಿಯೆ ಪ್ರಗತಿಯಲ್ಲಿದೆ.<br>(ವಿಷಯವಾರು ಹುದ್ದೆಗಳ ಮಾಹಿತಿಯನ್ನು ಅನುಬಂಧ-03 ರಲ್ಲಿ ಲಗತ್ತಿಸಿದೆ.)<br>ಪ್ರತ್ಯೇಕ ಜಿಲ್ಲಾವಾರು ಮಾಹಿತಿಯು ಸದರಿ ವಿಷಯದಲ್ಲಿ ಅನ್ವಯವಾಗುವುದಿಲ್ಲ. |
| (ಇ) | ಪ್ರೌಢ ಶಾಲಾ ಶಿಕ್ಷಕರನ್ನು ಪದವಿ ಪೂರ್ವ ಕಾಲೇಜಿಗೆ ಉಪನ್ಯಾಸಕರನ್ನಾಗಿ ಬಡ್ತಿ ನೀಡಲು ಸರ್ಕಾರ ಅನುಸರಿಸುತ್ತಿರುವ ನಿಯಮಗಳು ಹಾಗೂ ಮಾನದಂಡಗಳು ಯಾವುವು; | ಪ್ರಸ್ತುತ, ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 35 ಡಿಜಿಓ 2009 ದಿನಾಂಕ: 15-05-2014 ರಂತೆ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ನೇಮಕಾತಿಗೆ ಸಂಬಂಧಿಸಿದಂತೆ ನೇರ ನೇಮಕಾತಿಗೆ ಶೇ.75 ರಷ್ಟು ಮತ್ತು ಸರ್ಕಾರಿ ಪ್ರೌಢ ಶಾಲಾ ಸಹ ಶಿಕ್ಷಕರಿಗೆ ಪದವಿ ಪೂರ್ವ |

Scanned with OKEN Scanner

| | | |
|---|---|---|
| | | ಕಾಲೇಜುಗಳ ಉಪನ್ಯಾಸಕರ ಹುದ್ದೆಗೆ ಪದೋನ್ನತಿ ನೀಡಲು ಶೇ:25 ರಷ್ಟು ಅವಕಾಶ ಕಲ್ಪಿಸಿರುತ್ತದೆ, ಹಾಗೂ ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 185 ಡಿಜಿಡಿ 2017 (ಭಾಗ-3), ದಿನಾಂಕ: 01-08-2024 ರಲ್ಲಿ ನಿಗಧಿಪಡಿಸಿರುವಂತೆ ಸಂಬಂಧಿಸಿದ ವಿಷಯದ ಸ್ನಾತಕೋತ್ತರ ಪದವಿಯಲ್ಲಿ ಸಾಮಾನ್ಯ ವರ್ಗಕ್ಕೆ ಸೇರಿದವರು ಕನಿಷ್ಟ 55% ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಕ್ಕೆ ಮತ್ತು ಸೇರಿದವರು ಕನಿಷ್ಟ 50% ರಷ್ಟು ಶೇಕಡಾ ಅಂಕವನ್ನು ಮತ್ತು ಬಿ.ಇಡಿ ಪದವಿಯನ್ನು ನಿಗದಿಪಡಿಸಲಾಗಿದೆ. ಮುಂದುವರೆದು ಮುಂಬಡ್ತಿ ಮೂಲಕ ಬಡ್ತಿ ಮಾಡುವ ಹುದ್ದೆಗಳಿಗೆ ಅರ್ಹತಾ ಸಹ ಶಿಕ್ಷಕರುಗಳಿಗೆ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಅರ್ಹತಾ ಪರೀಕ್ಷೆಯನ್ನು ನಿಗದಿಪಡಿಸಲಾಗಿದ್ದು, ಅರ್ಹತಾ ಪರೀಕ್ಷೆಯಲ್ಲಿ ಶೇಕಡ 50% ಅಂಕ ಪಡೆದ ಪ್ರೌಢಶಾಲಾ ಸಹ ಶಿಕ್ಷಕರಿಗೆ ಪದವಿ ಪೂರ್ವ ಉಪನ್ಯಾಸಕ ಹುದ್ದೆಗಳಿಗೆ ಪದೋನ್ನತಿ ನೀಡಲಾಗುವುದು. |
| (ಈ) | ಪ್ರೌಢಶಾಲಾ ಶಿಕ್ಷಕರನ್ನು ಪದವಿ ಪೂರ್ವ ಕಾಲೇಜಿಗೆ ಉಪನ್ಯಾಸಕರನ್ನಾಗಿ ಬಡ್ತಿ ನೀಡುವಲ್ಲಿ ವಿಭಾಗವಾರು ಜೇಷ್ಠತಾ ಪಟ್ಟಿಯನ್ನು ರಚಿಸುವಾಗ ಅನುಸರಿಸುವ ಮಾನದಂಡಗಳೇನು; | ಪ್ರೌಢಶಾಲೆಗಳಲ್ಲಿ ನೇರ ನೇಮಕಾತಿ ಹೊಂದಿರುವ ಶಿಕ್ಷಕರು ಸೇವೆಗೆ ಸೇರಿದ ದಿನಾಂಕ ಮತ್ತು ಜನ್ಮ ದಿನಾಂಕಗಳು ಒಂದೇ ಆಗಿರುವ ಪ್ರಕರಣಗಳಲ್ಲಿ ಜೇಷ್ಠತೆಯನ್ನು ನಿಗಧಿಪಡಿಸುವಾಗ ಕರ್ನಾಟಕ ಸರ್ಕಾರಿ ನೌಕರರ (ಜೇಷ್ಠತೆ) ನಿಯಮಗಳು 1957ರ ನಿಯಮ-5 ರಲ್ಲಿ ಅವಕಾಶಿಸಿರುವಂತೆ, ನಿಯಮ-18 General Recruitment Rules-1977ನ್ನು ಓದಿಕೊಂಡಂತೆ ಜನ್ಮದಿನದ ಹಿರಿತನದ ಆಧಾರದ ಮೇಲೆ ವಿಭಾಗವಾರು ನಿಯಮಾನುಸಾರ ಪರಿಶೀಲಿಸಿ ಜೇಷ್ಠತೆಯನ್ನು ನಿಗಧಿಪಡಿಸಿಕೊಂಡು ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ ಇವರು ನೀಡುವ ರಾಜ್ಯಮಟ್ಟದ ಜೇಷ್ಠತಾ ಪಟ್ಟಿಯನ್ನು ಪರಿಗಣಿಸಿ ಬಡ್ತಿ ನೀಡಲಾಗುವುದು. |
| (ಉ) | ಕೆಲವೇ ತಿಂಗಳುಗಳಲ್ಲಿ ಪ್ರೌಢಶಾಲಾ ಶಿಕ್ಷಕರಿಂದ ಪದವಿ ಪೂರ್ವ ಉಪನ್ಯಾಸಕರ ಹುದ್ದೆಗಳ ಬಡ್ತಿ ಕಾರ್ಯವನ್ನು ಪೂರ್ಣಗೊಳಿಸಲಾಗುವುದು ಎಂದು ಸರ್ಕಾರ ತಿಳಿಸಿದ್ದು, ಇಲ್ಲಿಯವರೆಗೂ ಬಡ್ತಿ ಕಾರ್ಯವನ್ನು ಮಾಡದೆ ಇರಲು ಕಾರಣವೇನು: ಯಾವ ಕಾಲಮಿತಿಯಲ್ಲಿ ಬಡ್ತಿ | ಸರ್ಕಾರಿ ಪ್ರೌಢಶಾಲಾ ಸಹಶಿಕ್ಷಕರ ವೃಂದದಿಂದ ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ಸರ್ಕಾರಿ ಪದವಿಪೂರ್ವ ಕಾಲೇಜುಗಳ ಉಪನ್ಯಾಸಕರ ವೃಂದಕ್ಕೆ ಬಡ್ತಿ ನೀಡುವ ಸಂಬಂಧ ಆಯುಕ್ತರು ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ಇವರು ಕೇಂದ್ರೀಕೃತ ದಾಖಲಾತಿ ಘಟಕದ ಮೂಲಕ ದಿನಾಂಕ: 25.05.2026 ರಿಂದ 30.05.2026 ರವರೆಗೆ ಅರ್ಹತಾ ಪರೀಕ್ಷೆಯನ್ನು ನಡೆಸಿರುತ್ತಾರೆ. |

Scanned with OKEN Scanner

| | | |
|---|---|---|
| | ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗುವುದು? (ವಿವರ ನೀಡುವುದು) | ಅರ್ಹತಾ ಪರೀಕ್ಷೆ ನಡೆಸಿದ ನಂತರ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರುರವರು ಅರ್ಹತಾ ಪರೀಕ್ಷೆಯಲ್ಲಿ ಶೇಕಡ 50 ಹಾಗೂ ಅದಕ್ಕಿಂತ ಹೆಚ್ಚು ಅಂಕಗಳನ್ನು ಗಳಿಸಿ ಅರ್ಹತೆ ಪಡೆದು ಉತ್ತೀರ್ಣಗೊಂಡಿರುವ ಶಿಕ್ಷಕರ ವಿಷಯವಾರು (ಕನ್ನಡ, ಇಂಗ್ಲೀಷ್, ಹಿಂದಿ, ಉರ್ದು, ಸಂಸ್ಕೃತ, ಇತಿಹಾಸ, ಅರ್ಥಶಾಸ್ತ್ರ, ಭೂಗೋಳಶಾಸ್ತ್ರ, ಸಮಾಜಶಾಸ್ತ್ರ, ರಾಜ್ಯಶಾಸ್ತ್ರ, ಗಣಿತ ಮತ್ತು ಜೀವಶಾಸ್ತ್ರ) ಅರ್ಹತಾ ಪಟ್ಟಿಯನ್ನು ಪದವಿ ಪೂರ್ವ ಶಿಕ್ಷಣ ಇಲಾಖೆಗೆ ಸಲ್ಲಿಸಿರುತ್ತಾರೆ.<br><br>ಅರ್ಹತಾ ಪಟ್ಟಿಯನುಸಾರ ರಾಜ್ಯದ ಎಲ್ಲಾ ಜಿಲ್ಲೆಯ ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕರುಗಳಿಂದ ದಸ್ತಾವೇಜುಗಳನ್ನು ಸ್ವೀಕರಿಸಿ ನಿರ್ದೇಶನಾಲಯಕ್ಕೆ ಸಲ್ಲಿಸುವಂತೆ ರಾಜ್ಯದ ಎಲ್ಲಾ ಜಿಲ್ಲೆಯ ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕರುಗಳಿಗೆ ದಿನಾಂಕ: 03-08-2026 ರಂದು ಸುತ್ತೋಲೆಯ ಮೂಲಕ ಸೂಚಿಸಲಾಗಿದೆ. ಅದರನ್ವಯ ಬಡ್ತಿ ಪ್ರಕ್ರಿಯೆಯನ್ನು ಶೀಘ್ರವಾಗಿ ಪೂರ್ಣಗೊಳಿಸಲಾಗುವುದು. |

ಸಂಖ್ಯೆ: ಇಪಿ 260 ಡಿಜಿಡಬ್ಲ್ಯೂ 2026

(ಎಸ್. ಮಧು ಬಂಗಾರಪ್ಪ)
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು

Scanned with OKEN Scanner

| ಪ್ರಶ್ನೆ ಸಂಖ್ಯೆ: 80 (798) ಗೆ ಅನುಬಂಧ -1 ಜಿಲ್ಲಾವಾರು ಉಪನ್ಯಾಸಕರ ಹುದ್ದೆಗಳ ವಿವರ | | | | |
|---|---|---|---|---|
| SL NO | DIST NAME | Sactioned | Working | Vacant |
| 1 | BANGALORE NORTH | 343 | 290 | 53 |
| 2 | BANGALORE SOUTH | 273 | 235 | 38 |
| 3 | BANGALORE RURAL | 210 | 140 | 70 |
| 4 | RAMANAGAR | 304 | 173 | 131 |
| 5 | BELLARY | 472 | 270 | 202 |
| 6 | CHIKKODI | 314 | 114 | 200 |
| 7 | BELAGAVI | 328 | 179 | 149 |
| 8 | BAGALKOT | 380 | 179 | 201 |
| 9 | VIJAYAPURA | 325 | 176 | 149 |
| 10 | BIDAR | 217 | 138 | 79 |
| 11 | DAVANAGERE | 460 | 346 | 114 |
| 12 | CHITRADURGA | 452 | 258 | 194 |
| 13 | CHIKKAMAGLUR | 408 | 189 | 219 |
| 14 | GADAG | 236 | 95 | 141 |
| 15 | HAVERI | 319 | 155 | 164 |
| 16 | DHARWAD | 264 | 168 | 96 |
| 17 | KALABURGI | 517 | 352 | 165 |
| 18 | YADGIR | 226 | 111 | 115 |
| 19 | HASSAN | 753 | 376 | 377 |
| 20 | CHIKKABALLAPURA | 255 | 123 | 132 |
| 21 | KOLAR | 385 | 198 | 187 |
| 22 | CHAMARAJNAGAR | 258 | 147 | 111 |
| 23 | MYSURU | 872 | 656 | 216 |
| 24 | MANDYA | 623 | 385 | 238 |
| 25 | UTTARA KANNADA | 439 | 191 | 248 |
| 26 | KOPPAL | 392 | 180 | 212 |
| 27 | RAICHUR | 351 | 201 | 150 |
| 28 | DAKSHINA KANNADA | 580 | 302 | 278 |
| 29 | UDUPI | 442 | 239 | 203 |
| 30 | SHIVAMOGGA | 595 | 371 | 224 |
| 31 | TUMKUR | 777 | 430 | 347 |
| 32 | KODAGU | 143 | 56 | 87 |
| | TOTAL | 12913 | 7423 | 5490 |

| ಪ್ರಶ್ನೆ ಸಂಖ್ಯೆ: 80 (798) ಗೆ ಅನುಬಂಧ -2 ವಿಷಯವಾರು ಉಪನ್ಯಾಸಕರ ಹುದ್ದೆಗಳ ವಿವರ | | | | |
|---|---|---|---|---|
| SL NO | SUBJECT NAME | SANCTIONED | WORKING | VACANT |
| 1 | KANNADA | 1441 | 771 | 670 |
| 2 | ENGLISH | 1438 | 865 | 573 |
| 3 | HINDI | 90 | 51 | 39 |
| 4 | TELUGU | 1 | 1 | 0 |
| 5 | MARATHI | 6 | 5 | 1 |
| 6 | URDU | 77 | 27 | 50 |
| 7 | SANSKRIT | 38 | 22 | 16 |
| 8 | HISTORY | 1344 | 790 | 554 |
| 9 | ECONOMICS | 1357 | 703 | 654 |
| 10 | LOGIC | 3 | 2 | 1 |
| 11 | GEOGRAPHY | 155 | 89 | 66 |
| 12 | BUSI.STUDIES | 1053 | 481 | 572 |
| 13 | SOCIOLOGY | 1174 | 608 | 566 |
| 14 | POLITICAL SC | 1265 | 798 | 467 |
| 15 | STATISTICS | 1 | 1 | 0 |
| 16 | PSYCHOLOGY | 1 | 1 | 0 |
| 17 | PHYSICS | 826 | 574 | 252 |
| 18 | CHEMISTRY | 831 | 578 | 253 |
| 19 | MATHEMATICS | 763 | 540 | 223 |
| 20 | BIOLOGY | 820 | 445 | 375 |
| 21 | ELECTRONICS | 10 | 8 | 2 |
| 22 | COMPUTER-SC | 154 | 12 | 142 |
| 23 | EDUCATION | 65 | 51 | 14 |
| | TOTAL | 12913 | 7423 | 5490 |

ಪ್ರಶ್ನೆ ಸಂಖ್ಯೆ: 80(798) ಗೆ ಅನುಬಂಧ-03 -ಸಹಶಿಕ್ಷಕ ಹುದ್ದೆ ಯಿಂದ ಉಪನ್ಯಾಸಕ ಹುದ್ದೆಗೆ ಬಡ್ತಿಯನ್ನು ನೀಡುವ ಸಂಬಂಧ ವಿಷಯವರು ಲಭ್ಯವಿರುವ ಖಾಲಿ ಹುದ್ದೆಗಳ ವಿವರ

## VACANCY AVAILABLE FOR PROMOTION 2026-2027

| SL NO | SUBJECT | VACANCY AVAILABLE FOR PROMOTION | | |
|---|---|---|---|---|
| | | NK | KK | TOTAL |
| 1 | KANNADA | 220 | 35 | 255 |
| 2 | ENGLISH | 96 | 22 | 118 |
| 3 | HINDI | 12 | 5 | 17 |
| 4 | URDU | 12 | 3 | 15 |
| 5 | SANSKRIT | 8 | 0 | 8 |
| 6 | HISTORY | 86 | 18 | 104 |
| 7 | ECONOMICS | 123 | 24 | 147 |
| 8 | GEOGRAPHY | 22 | 0 | 22 |
| 9 | SOCIOLOGY | 140 | 34 | 174 |
| 10 | POL.SCIENCE | 74 | 11 | 85 |
| 11 | MATHS | 23 | 5 | 28 |
| 12 | BIOLOGY | 31 | 11 | 42 |
| | TOTAL | 847 | 168 | 1015 |

[illegible]